

ಸಂಸ್ಥೆಗಳಿಗೆ ಲಕ್ಷಾಂತರ ಡಾಲರ್‌ಗಳ ಪರಿಹಾರವೂ ಸಿಕ್ಕಿದೆ. ಅಮೆರಿಕದ ಕೋರ್ಟುಗಳು ಸೈ–ಹಬ್‌ನ ಕಳ್ಳತನ ನಿಲ್ಲಿಸಲು ಲಕ್ಷ ಲಕ್ಷ ಡಾಲರ್‌ಗಳ ದಂಡವನ್ನು ವಿಧಿಸುವುದರ ಜೊತೆ ಇಂಟರ್ನೆಟ್ ಸರ್ಚ್ ಎಂಜಿನ್, ವೆಬ್ ಹೋಸ್ಟಿಂಗ್ ಮತ್ತು ಇಂಟರ್ನೆಟ್ ಸರ್ವಿಸ್ ಪ್ರೊವೈಡರ್‌ಗಳಿಗೆ ಕೂಡಲೇ ಕಳ್ಳ ವೆಬ್‌ಸೈಟ್‌ಗಳನ್ನು ನಿಷ್ಕ್ರಿಯಗೊಳಿಸಬೇಕು ಎಂದು ನೋಟೀಸು ಕಳಿಸಿವೆ. ಕೆಲವರು ಇದಕ್ಕೆ ಸ್ಪಂದಿಸಿದ್ದಾರೆ.

ಮಾಹಿತಿ ಕಳ್ಳತನ ಇದೇ ಮೊದಲೇನಲ್ಲ. ಅಮೆರಿಕದ 29ರ ಯುವಕ ಅರೋನ್ ಸ್ವಾರ್ಟ್ಜ್ ಮಾಹಿತಿ ಸ್ವಾತಂತ್ರ್ಯದ ಮಹತ್ವವನ್ನು ಪ್ರತಿಪಾದಿಸಿ 'ಗೆರಿಲ್ಲಾ ಓಪನ್ ಆಕ್ಸೆಸ್ ಮೆನಿಫೆಸ್ಟೊ' ಪ್ರಕಟಿಸಿ, 'ನಮಗೆಲ್ಲ ಮಾಹಿತಿ ಅನಿವಾರ್ಯ, ಅದೆಲ್ಲೇ ಇದ್ದರೂ ಅದನ್ನು ಪಡೆದು, ಅದರ ಪ್ರತಿ ತಯಾರಿಸಿ ಇಡೀ ಜಗತ್ತಿಗೆ ಹಂಚಬೇಕು' ಎಂದು ಪ್ರತಿಪಾದಿಸಿದ್ದ. **JSTOR**ನ ಡಿಜಿಟಲ್ ಲೈಬ್ರರಿಯಲ್ಲಿರುವ ಅಸಂಖ್ಯಾತ ಸಂಶೋಧನಾ ಪ್ರಬಂಧ, ಮಾಹಿತಿ ಮುಕ್ತವಾಗಿ ದೊರೆಯದ್ದರಿಂದ ವ್ಯಗ್ರನಾಗಿ, ಆ ಲೈಬ್ರರಿಯ ವೆಬ್‌ಸೈಟ್‌ನ್ನು ಹ್ಯಾಕ್‌ಮಾಡಿ ಸಾವಿರಾರು ಫೈಲ್‌ಗಳನ್ನು ಡೌನ್‌ಲೋಡ್ ಮಾಡಿ ಇಂಟರ್ನೆಟ್‌ಗೆ ಹಾಕಿಬಿಟ್ಟಿದ್ದ. ಡಿಎನ್‌ಎಸ್ ಸಮಸ್ಯೆ ಪರಿಹಾರವಾದರೂ, ಅದು ಕೇವಲ ತಾತ್ಕಾಲಿಕ ಮತ್ತು ಸಾವಿರಾರು ಕೋಟಿ ಡಾಲರ್ ಬಂಡವಾಳ ಹಾಕಿರುವ ಸಂಸ್ಥೆಗಳು ಸುಮ್ಮನಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿರುವ ಕೆಲವು ಸಂಶೋಧಕರು ಬದಲೀ ವ್ಯವಸ್ಥೆ ಮಾಡಿಕೊಳ್ಳಲೇಬೇಕಿದೆ ಎಂದಿದ್ದಾರೆ.

'ನಾವು ಕಷ್ಟಪಟ್ಟು ಸಂಪಾದಿಸಿದ್ದನ್ನು ನಿಮಗೇಕೆ ಪುಕ್ಕಟೆಯಾಗಿ ನೀಡಬೇಕು, ಹಾಗೇನಾದರೂ ಮಾಡಿದರೆ ಅದು ನಾವು ನಮ್ಮ ಲೇಖಕರಿಗೆ, ಸದಸ್ಯರಿಗೆ, ಎಡಿಟರ್‌ಗಳಿಗೆ, ಅಧಿಕಾರಿಗಳಿಗೆ, ಉನ್ನತ ಸಮಿತಿಗೆ ಮಾಡುವ ಅವಮಾನ' ಎಂದಿರುವ ಎಲ್ಸೆವಿಯರ್, 'ಕಳ್ಳತನ ಸರಿಯಲ್ಲ ಎಂದು ಎಷ್ಟೇ ಹೇಳಿದರೂ ನಕಲಿ ಡೊಮೈನ್‌ಗಳನ್ನು ಸೈಹಬ್ ಸೃಷ್ಟಿಮಾಡುತ್ತಲೇ ಇದೆ, ಆದ್ದರಿಂದ ನಮಗೆ ಕ್ರಿಯಾತ್ಮಕ ಅಂದರೆ ಯಾವಾಗಲೂ ಅನ್ವಯವಾಗುವ ತಡೆಯಾಜ್ಞೆ ನೀಡಿ' ಎಂದು ದೆಹಲಿ ಹೈಕೋರ್ಟ್‌ಗೆ ಅರ್ಜಿ ಹಾಕಿದೆ. ಇತ್ತ ನಮ್ಮ ವಿಜ್ಞಾನಿಗಳು, 'ಒಂದೊಂದು ಜರ್ನಲ್‌ನ ಚಂದಾಹಣ 15ರಿಂದ 20 ಸಾವಿರ ರೂಪಾಯಿ ಇರುತ್ತದೆ. ದೊಡ್ಡ ಸಂಸ್ಥೆಗಳು ಚಂದಾಹಣ ನೀಡಿ ಪರವಾನಿಗೆ ಪಡೆಯುತ್ತವೆ. ಸ್ವತಂತ್ರವಾಗಿ ಸಂಶೋಧನೆ ಮಾಡುವ ನಮಗೆಲ್ಲ ಅಷ್ಟೊಂದು ಹಣ ಹೊಂದಿಸುವುದು ಸಾಧ್ಯವಿಲ್ಲ, ನಮಗೆ ಸೈಹಬ್ ಬೇಕೇ ಬೇಕು' ಎಂದಿದ್ದಾರೆ.

ಸಂಶೋಧನೆ ಮತ್ತು ಆವಿಷ್ಕಾರಗಳಲ್ಲಿ ಗಣನೀಯ ಸಾಧನೆ ಮಾಡುತ್ತಿರುವ ಸಂಶೋಧಕರಿಗೆ ನೆರವಾಗಲು ಕೇಂದ್ರ ಸರ್ಕಾರ 'ಸೈನ್ಸ್, ಟೆಕ್ನಾಲಜಿ ಅಂಡ್ ಇನ್ನೋವೇಶನ್ ಪಾಲಿಸಿ–2020'ನ್ನು ರೂಪಿಸಿದ್ದು ವಿಶ್ವದ 3–4 ಸಾವಿರ ಅತ್ಯುತ್ತಮ ಜರ್ನಲ್‌ಗಳನ್ನು ಬ್ರೌಸ್ ಮಾಡಲು ಇಡೀ ದೇಶಕ್ಕಾಗಿ 'ಒನ್ ನೇಶನ್, ಒನ್ ಸಬ್‌ಸ್ಕ್ರಿಪ್ಶನ್' ಯೋಜನೆ ಜಾರಿಗೆ ತರಲು ಪ್ರಯತ್ನಿಸುತ್ತಿದೆ. ಇದರಿಂದ ಹೆಚ್ಚೇನೂ ಸಹಾಯವಾಗದು ಎಂದಿರುವ 'ಇಂಡಿಯ ಓಪನ್ ಆಕ್ಸೆಸ್'ನ ಶ್ರೀಧರ್ ಗೌತಮ್, 'ಎಲ್ಸೆವಿಯರ್‌ನ ಬಳಿ ನಲವತ್ತು ಸಾವಿರ ಹೈ ಇಂಪ್ಯಾಕ್ಟ್ ಜರ್ನಲ್‌ಗಳ ಭಂಡಾರವಿದೆ. ಅವುಗಳ ಪೈಕಿ ಮೂರ್ನಾಲ್ಕು ಸಾವಿರ ಯಾವ ಲೆಕ್ಕ' ಎನ್ನುತ್ತಾರೆ. ಅಲ್ಲದೆ ಕಡಿಮೆ ಬೆಲೆಯ ವೆಬ್‌ಸೈಟ್‌ಗಳಿಂದಾಗುವ ಪ್ರಯೋಜನ ಅಷ್ಟಕಷ್ಟೇ ಎನ್ನುವ ಅಭಿಪ್ರಾಯವೂ ತಜ್ಞ ವಲಯದಲ್ಲಿದೆ. ಇಲ್ಲಿ ನಡೆಯುವ ಸಂಶೋಧನೆಗಳಿಗೆ ಖರ್ಚಾಗುವುದು ಜನಸಾಮಾನ್ಯರ ತೆರಿಗೆ ಹಣ. ಆದರೆ ಪ್ರಕಟವಾಗುವ ಸಂಶೋಧನಾ ಪ್ರಬಂಧದ ಹಕ್ಕುಸ್ವಾಮ್ಯ ಪಬ್ಲಿಶರ್‌ಗೆ ಸೇರುವುದು ಅನ್ಯಾಯವಲ್ಲವೆ ಎಂಬ ಪ್ರಶ್ನೆಯೂ ಎದ್ದಿದೆ.

ಅಮೆರಿಕ, ಯುರೋಪ್ ಸಮುದಾಯ ಕಾಪಿರೈಟ್ ತಮ್ಮಲ್ಲೇ ಉಳಿಸಿಕೊಳ್ಳಲು ಮತ್ತಷ್ಟು ಹಣ ವ್ಯಯಿಸಲು ಸಜ್ಜಾಗಿವೆ. ಚಂದಾದಾರಿಕೆಗೆಂದೇ ವಾರ್ಷಿಕ 1500 ಕೋಟಿ ರೂಪಾಯಿ ಖರ್ಚುಮಾಡುತ್ತಿರುವ ನಮ್ಮ ಸಂಶೋಧನಾ ಸಂಸ್ಥೆ ಮತ್ತು ಯುನಿವರ್ಸಿಟಿಗಳು ಕಾಪಿರೈಟ್‌ಗಾಗಿ ಹಣ ಹೊಂದಿಸುವುದು ಅಸಾಧ್ಯದ ಮಾತು. ದಿ ಲಾನ್ಸೆಟ್ ಗ್ಲೋಬಲ್‌ನ ವೆಬ್‌ಸೈಟಿನ ಒಂದು ಲೇಖನವನ್ನೋದಲು ಐದು ಸಾವಿರ ಡಾಲರ್ ಬೇಕು. ನೇಚರ್ ರಿಸರ್ಚ್‌ನ ಲೇಖನಗಳಿಗೆ 11,6000 ಡಾಲರ್ ಖರ್ಚಾದರೆ, ಸೆಲ್‌ಪ್ರೆಸ್ ಸಂಶೋಧನಾ ಪ್ರಬಂಧ ಪ್ರಕಟಿಸಲು 9,900 ಡಾಲರ್ ನಿಗದಿ ಮಾಡಿದೆ. ಸಂಶೋಧನಾ ಪ್ರಬಂಧಗಳನ್ನು ತಿದ್ದಲು, ವಿಮರ್ಶಿಸಲು ಹಿಂದೆಲ್ಲಾ ಎಲ್ಸೆವಿಯರ್‌ಗೆ ಕಳಿಸಲಾಗುತ್ತಿತ್ತು. ಯಾವಾಗ ಸೈಹಬ್ ಪ್ರಾರಂಭವಾಯಿತೋ, ಸುಮಾರು 9000 ವಿಜ್ಞಾನಿಗಳು ತಮ್ಮ ಪ್ರಬಂಧಗಳನ್ನು ಅಲ್ಲಿಗೆ ಕಳಿಸುವುದಿಲ್ಲ ಎಂದು ಪಣತೊಟ್ಟರು. ಜರ್ಮನಿಯ 200 ಪ್ರಸಿದ್ಧ ಸಂಶೋಧನಾ ಸಂಸ್ಥೆಗಳು 'ನಿಮ್ಮ ಫೀಸ್ ತುಂಬಾ ದುಬಾರಿ' ಎಂದು ಚಂದಾದಾರಿಕೆಯನ್ನು ಮುಂದುವರಿಸಲಿಲ್ಲ.

ಇದೇ ಜನವರಿ 6ರಂದು ವಾದ ಪ್ರತಿವಾದ ಆಲಿಸಿದ ದೆಹಲಿ ಹೈಕೋರ್ಟು ಯಾವುದೇ ತೀರ್ಪು ನೀಡಿಲ್ಲ. ಫ್ರೀ ಆಕ್ಸೆಸ್ ಬಯಸುತ್ತಿರುವ ವಿಜ್ಞಾನಿಗಳು ನಮ್ಮ ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿಯ ಜೊತೆ ಕೈಜೋಡಿಸಿ ಮೊಕದ್ದಮೆಯ ಮೇಲೆ ಮಧ್ಯಂತರ ಅರ್ಜಿ ಹಾಕಿದ್ದಾರೆ. ದೇಶದ ಎಲ್ಲರಿಗೂ ಮುಕ್ತ ವಿಜ್ಞಾನ, ತಂತ್ರಜ್ಞಾನ, ವಿಜ್ಞಾನ ಮಾಹಿತಿ, ದತ್ತಾಂಶ ಸಿಗಬೇಕೆನ್ನುವ ದೂರದೃಷ್ಟಿಯುಳ್ಳ, ಎಲ್ಲರನ್ನೂ ಒಳಗೊಳ್ಳುವ ವೈಜ್ಞಾನಿಕ ನೀತಿ ರೂಪಿಸುತ್ತಿರುವ ಭಾರತಕ್ಕೆ ಈ ಮೊಕದ್ದಮೆ ಗೆಲ್ಲಲೇಬೇಕಿದೆ. ತೀರ್ಪು ಬರಬೇಕಿದೆ. ಅಲ್ಲಿಯವರೆಗೆ ನಮ್ಮ ಸಂಶೋಧಕರು, ವಿಜ್ಞಾನಿಗಳು ಕಾಯಲೇಬೇಕಿದೆ.

ಇಷ್ಟೆಲ್ಲದರ ನಡುವೆ ವೆಲ್‌ಕಮ್ ಟ್ರಸ್ಟ್ ಮತ್ತು ಬಿಲ್ ಹಾಗೂ ಮೆಲಿಂಡಾ ಗೇಟ್ಸ್ ಫೌಂಡೇಶನ್‌ಗಳು ಯುರೋಪಿನ ದೇಶಗಳು 2018ರಲ್ಲಿ ಮಂಡಿಸಿದ 'ಓಪನ್ ಆಕ್ಸೆಸ್ ಸೈನ್ಸ್ ಪಬ್ಲಿಶಿಂಗ್' ಅನ್ನು ಬೆಂಬಲಿಸಿದ್ದು, ನಾವೂ ಫಂಡ್ ಮಾಡುತ್ತೇವೆ ಎಂದಿವೆ. ಯುನೆಸ್ಕೊ ಮತ್ತು ಒಇಸಿಡಿ ಸಹ ಇದನ್ನು ಬೆಂಬಲಿಸಿವೆ.

ಪ್ರತಿಕ್ರಿಯಿಸಿ: **feedback@sudha.co.in**

**ಸರ್ಕಾರ 'ಸೈನ್ಸ್, ಟೆಕ್ನಾಲಜಿ ಅಂಡ್ ಇನ್ನೋವೇಶನ್ ಪಾಲಿಸಿ-2020'ಯನ್ನು ರೂಪಿಸಿದ್ದು ವಿಶ್ವದ ಜರ್ನಲ್‌ಗಳನ್ನು ಬ್ರೌಸ್ ಮಾಡಲು 'ಒನ್ ನೇಶನ್, ಒನ್ ಸಬ್‌ಸ್ಕ್ರಿಪ್ಷನ್' ಯೋಜನೆ ಜಾರಿಗೆ ತರಲು ಪ್ರಯತ್ನಿಸುತ್ತಿದೆ**